ಸಿ.ಸಿ ನಂ.20/2025
ಡಿ .ಡಬ್ಲ್ಯೂ ನಂ.1

**<u>ದಿಃ 13.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪಿರ್ಯಾದು ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ನಾನು ದ್ವಿತೀಯ ಪಿಯುಸಿ ಓದಿರುತ್ತೇನೆ. ನಾನು ಸಾಗರ ತಾಲ್ಲೂಕು, ಹುಲ್ಲುಕೋಡು ಗ್ರಾಮದಲ್ಲಿ ವಾಸವಿರುತ್ತೇನೆ. ನನ್ನ ಗಂಡನ ಊರು ಹುಲ್ಲುಕೋಡು. ಮೊದಲು ನನ್ನ ಗಂಡ ಪಿಗ್ಮಿ ಕಲೆಕ್ಷನ್ ಕೆಲಸದ ಜೊತೆ ಚಾಲಕ ವೃತ್ತಿ ನಿರ್ವಹಿಸುತ್ತಿದ್ದರು. ನನ್ನ ಗಂಡ ಬೇಕರಿ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಅವರ ಸ್ನೇಹಿತನ ಬೇಕರಿ ಎಂದು ನುಡಿಯುತ್ತಾರೆ. ಪಿರ್ಯಾದುದಾರರು ನೋಟೀಸು ಕಳುಹಿಸಿದಾಗ ನನಗೆ ತಲುಪಿತ್ತು ಎಂದರೆ ಸರಿ. ನಾನು ಸದರಿ ನೊಟೀಸಿಗೆ ಮರುಉತ್ತರ ನೀಡಿಲ್ಲ ಎಂದರೆ ಸರಿ. ನಾನು ಯುನಿಯನ್ ಬ್ಯಾಂಕ್ ಸಾಗರ ಶಾಖೆಯಲ್ಲಿ ಖಾತೆ ಹೊಂದಿರುತ್ತೇನೆ. ಪ್ರಶ್ನಿತ ಚೆಕ್ ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದ್ದು ಎಂದರೆ ಸರಿ. ಪಿರ್ಯಾದುದಾರರು ನನ್ನ ಗಂಡನಿಗೆ ಪರಿಚಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿ ನನ್ನದು ಎಂದರೆ ಸರಿಯಲ್ಲ. ಸಾಗರದಲ್ಲಿ ಇರುವ ಕೇಸು ನನ್ನ ಗಂಡನ ಮೇಲೆ ಇದ್ದು ಅದನ್ನು ಈ ಪ್ರಕರಣದ ಪಿರ್ಯಾದುದಾರರು ದಾಖಲಿಸಿಲ್ಲ ಎಂದರೆ ಸರಿ. ಆ ಪ್ರಕರಣಕ್ಕೂ ಮತ್ತು ಈ ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮೊದಲ ಬಾರಿಗೆ ಈ ನ್ಯಾಯಾಲಯಕ್ಕೆ ಬಂದಾಗ ನನ್ನ ಗಂಡನ ಜೊತೆ ಬಂದಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನ್ಯಾಯಾಲಯಕ್ಕೆ ಬಂದಾಗ ನನ್ನ ಗಂಡನ ಜೊತೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಇತ್ತೀಚೆಗೆ ಸಾಗರದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಪಿರ್ಯಾದುದಾರರ ಜೊತೆ ವ್ಯವಹಾರ ಮಾಡಿ ಅವರ ಕಡೆಯಿಂದ ಹಣ ಪಡೆದಿದ್ದೆವು ಎಂದರೆ ಸರಿಯಲ್ಲ. ನನ್ನ ಗಂಡ ವ್ಯವಹಾರದಿಂದ ನಷ್ಟ ಹೊಂದಿ ಸಾಗರದಲ್ಲಿ ವಾಸವಿರದೇ ಬೇರೆ ಕಡೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಸಾಕ್ಷಿಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಪ್ರಶ್ನಿತ ಚೆಕ್ಕಿನಲ್ಲಿ ಸಾಕ್ಷಿ ವಿಚಾರಣೆಯಲ್ಲಿ ಇರುವ ರೀತಿಯೇ ನನ್ನ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಬದಲಾವಣೆ ಇರುತ್ತದೆ ಎಂದು ನುಡಿಯುತ್ತಾರೆ. ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ ಬ್ಯಾಂಕಿನವರು ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ. ಬ್ಯಾಂಕಿನವರು ನನ್ನ ಸಹಿ ಸರಿ ಇಲ್ಲ ಎಂದು ಹಿಂಬರಹ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಬ್ಯಾಂಕಿನಿಂದ ಮೆಸೇಜ್ ಬಂದಿತ್ತು ಎಂದು ನುಡಿಯುತ್ತಾರೆ. ನನಗೆ ಮೆಸೇಜ್ ಬಂದ ನಂತರ ನನ್ನ ಚೆಕ್ಕನ್ನು ಯಾರು ಬ್ಯಾಂಕಿಗೆ ಹಾಜರುಪಡಿಸಿದ್ದಾರೆ ಎಂದು ಬ್ಯಾಂಕಿನವರನ್ನು ವಿಚಾರಿಸಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ವಿಶ್ವಂ ಫೈನಾನ್ಸ್ ಮುಖ್ಯಸ್ಥರು ಮತ್ತು ಪಿರ್ಯಾದುದಾರರು ತುಂಬಾ ಆತ್ಮೀಯರು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆದರೆ ನನ್ನ ಚೆಕ್ಕನ್ನು ವಿಶ್ವಂ ಫೈನಾನ್ಸ್ ಗೆ ಕೊಟ್ಟಿದ್ದರು ಎನ್ನುವ ಬಗ್ಗೆ ಗೊತ್ತು ಎಂದು ನುಡಿಯುತ್ತಾರೆ.

ಸಿ.ಸಿ ನಂ.20/2025

ಡಿ .ಡಬ್ಲ್ಯೂ ನಂ.1

ನಾನು ಪಿರ್ಯಾದುದಾರರಿಗೆ 6 ಲಕ್ಷ ಹಣ ಕೊಡುವುದು ಬಾಕಿ ಇದ್ದರು ಸಹ ನಾನು ಅವರ ಕಡೆಯಿಂದ ಯಾವುದೇ ಹಣ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ನನಗೆ ತೊಂದರೆ ಇಲ್ಲ.

**ಮರು ವಿಚಾರಣೆಃ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.